

# ನಾಲಿಗೆಯಲ್ಲ, ಕ್ಲಿಪ್!

ತುದಿ ನಾಲಿಗೆಯಲ್ಲಿ ಯಾವುದೇ ವಸ್ತುವನ್ನು ಇಟ್ಟುಕೊಳ್ಳಲು ಪ್ರಯತ್ನಿಸಿ ನೋಡಿ. ಇದು ಸಾಮಾನ್ಯರಿಗೆ ಸಾಧ್ಯವಾಗದ ಮಾತು. ಆದರೆ ಚೀನಾ ದೇಶದ ಡೇಜಿಂಗ್ ಪ್ರಾಂತ್ಯದ ಝಿಯಾವೊ ಝಿನ್ ಎಂಬ ಬಾಲಕ ತನ್ನ ನಾಲಿಗೆಯನ್ನು ಕ್ಲಿಪ್ ತರಹ ಬಳಸಿಕೊಳ್ಳಬಲ್ಲ!

ಹದಿಮೂರು ವರ್ಷ ವಯಸ್ಸಿನ ಈತನಿಗೆ ಇಯರ್ ಬಡ್,ಪೇಪರ್, ಹೇರ್ ಪಿನ್ ಮುಂತಾದ ದಿನ ನಿತ್ಯದ ವಸ್ತುಗಳನ್ನು ಕೊಟ್ಟರೆ ತನ್ನ ನಾಲಿಗೆ ತುದಿಯಲ್ಲಿನಿರಾಯಾ ಸವಾಗಿ ಸಿಕ್ಕಿಸಿಕೊಳ್ಳಬಲ್ಲ. ನಾವೆಲ್ಲಾ ಬೆರಳುಗಳ ನಡುವೆ ವಸ್ತುಗಳನ್ನು ಹೇಗೆ ಇಟ್ಟುಕೊಳ್ಳುತ್ತೇವೆಯೋ, ಹಾಗೆಯೇ ಝಿನ್, ತನ್ನ ತುದಿ ನಾಲಿಗೆಯಲ್ಲಿ ವಸ್ತುಗಳನ್ನು ಬೀಳದಂತೆ ಹಿಡಿದಿಟ್ಟುಕೊಂಡು ನೋಡುವವರಿಗೆ ಬೆರಗನ್ನುಂಟು ಮಾಡುತ್ತಾನೆ. ಸದ್ಯಕ್ಕೆ ವೈದ್ಯರೂ ಇದಕ್ಕೆ ಕಾರಣಗಳನ್ನು ಹೇಳಿಲ್ಲ.

■ ಬಿ.ಹೆಚ್.ವಿನಯ್ ಕುಮಾರ್

